ಸಾಯಂಕಾಲದ ಸಮಯವಾಗಿತ್ತು. ಮೂವತ್ತು–ನಾಲ್ವತ್ತು ಜನರು ಸೇರಿ ಒಂದು ಹೆಣವನ್ನು ಹೊತ್ತು ಮಸಣಕ್ಕೆ ತಂದರು. ಹೆಣವನ್ನು ಮಣ್ಣಲ್ಲಿ ದಫನ್ ಮಾಡಿ ಹೊರಟು ಹೋದರು. ಸ್ವಲ್ಪ ಸಮಯದ ಬಳಿಕ ಕತ್ತಲೆ ಬಿತ್ತು. ಕೆಲವು ನರಿಗಳು ಊಳಿಡುತ್ತ ಮಸಣದ ಸುತ್ತಲೂ ಸುಳಿದಾಡಲಾರಂಭಿಸಿದವು. ಒಂದು ತೋಳವು ಮೆಲ್ಲನೆ ನಡೆದು ಗೋರಿಯ ಸಮೀಪ ಬಂದಿತ್ತು. ಬೆಳ್ದಿಂಗಳ ಕ್ಷೀಣ ಬೆಳಕು ಮಸಣದ ತುಂಬೆಲ್ಲ ಮಸುಕು ಮಸುಕಾಗಿ ಪಸರಿಸಿಕೊಂಡಿತು. ಗಿಡಮರಗಳ ನೆರಳು ವಿಚಿತ್ರವಾಗಿ ಚಾಚಿಕೊಂಡಿತು. ಅಚ್ಚು ಕಟ್ಟಾಗಿ ಕಟ್ಟಿ ಸಾರಿಸಿದ ಗೋರಿಯು ಶುಭ್ರ ಪ್ರತಿಮೆಯಂತೆ ಹೊಳೆಯುತ್ತಿತ್ತು.

